ಎಂ. ಅಬ್ದುಲ್ ರೆಹಮಾನ್ ಪಾಷ ಕಥೆಗಾರ, ಭಾಷಾ ವಿಜ್ಞಾನಿ, ಅನುವಾದಕ, ರಂಗಕರ್ಮಿ ಮತ್ತು ಸಿನಿಮಾ ಸಾಹಿತಿಯಾಗಿ ಗುರುತಿಸಿಕೊಂಡವರು. ಮೈಸೂರಿನ ಭಾಷಾ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿ ಪ್ರಸ್ತುತ ನಿವೃತ್ತರು.

ನೋಡಿ ಚಂದ್ರುಗೆ ಒಂದು ಐಡಿಯಾ ಹೊಳೆಯಿತು. ಇವನನ್ನೇ ಕುಲುಮೆವಾಲಾ ಕರೀಮ್ ಸಾಬ್ ಮಗನ ರೋಲಿಗೆ ತೆಗೆದುಕೊಂಡುಬಿಟ್ಟರೆ ಹೇಗೆ! ಈ ದೃಶ್ಯದಲ್ಲಿ ಬರೀ ಕುಲುಮೆಯ ತಿದಿಯನ್ನು ಎಳೆಯುವುದಷ್ಟೇ ಕೆಲಸ ಅಲ್ಲವೇ? 'ಪಾತ್ರ ಮಾಡ್ತೀಯಾ?' ಎಂದು ಕೇಳಿದ್ದಕ್ಕೆ ಒಂದು ಶಿವು ತಬ್ಬಿಬ್ಬಾಗಿ ನಿಂತಿದ್ದರೆ, ಇನ್ನೊಂದು ಕಡೆ ನಿತಿನ್‌ನ ತಾಯಿ ಇವನನ್ನು ಕೆಂಗಣ್ಣಿನಿಂದ ನೋಡುತ್ತಿದ್ದಳು.

ಚಂದ್ರುಗೆ ಇನ್ನೊಂದು ಉಪಾಯ ಹೊಳೆಯಿತು. 'ನಿನ್ನ ಶರ್ಟನ್ನು ಸ್ವಲ್ಪ ಹೊತ್ತು ಕೊಡ್ತೀಯಾ, ನಿನಗೆ ಹೊಸ ಅಂಗಿ ಕೊಡ್ತೀನಿ?' ಚಂದ್ರು ಕೇಳಿದ್ದಕ್ಕೆ, ಶಿವುಗೆ ಬಹಳ ಹೆಮ್ಮೆ ಎನ್ನಿಸಿತು. ಸುತ್ತಲೂ ನಿಂತಿದ್ದ ತನ್ನ ಹಳ್ಳಿಯ ಜನರ ಕಡೆಗೆ ನೋಡುತ್ತಾ, ತನ್ನ ಅಂಗಿಯನ್ನು ಬಿಚ್ಚಿ ಕೊಟ್ಟ. ಚಂದ್ರು ನಿತಿನ್‌ಗಾಗಿ ತಂದಿದ್ದ ಇನ್ನೊಂದು ಹೊಸ ಅಂಗಿಯನ್ನು ಶಿವುಗೆ ಕೊಟ್ಟ. ಅದನ್ನು ತೊಟ್ಟ ಶಿವು ಎದೆ ಇನ್ನೂ ಉಬ್ಬಿತ್ತು. ಆದರೆ, ಇದೇ ಒಂದು ದೊಡ್ಡ ದುರಂತಕ್ಕೆ ಕಾರಣವಾಗುತ್ತದೆ ಎಂದು ಪಾಪ, ಶಿವುಗೆ ಆಗ ಗೊತ್ತಾಗಲೇ ಇಲ್ಲ. ಆದರೂ ಶಿವುಗೆ ಶೂಟಿಂಗನ್ನು ಹತ್ತಿರದಿಂದ ನೋಡುವ ಸೌಭಾಗ್ಯ ದೊರಕಿದ್ದೇ ಬಹಳವಾಗಿತ್ತು.

ಶಿವು ಅಂಗಿಯನ್ನು ತೊಟ್ಟು ನಿತಿನ್ ಕರೀಮ್ ಸಾಬನ ಮಗ ಇಸ್ಮಾಯಿಲ್ ಪಾತ್ರ ಮಾಡಲು ಸೆಟ್ ಕಡೆಗೆ ಹೆಜ್ಜೆ ಹಾಕಿದ. ಈ ದೃಶ್ಯದಲ್ಲಿ ಇಸ್ಮಾಯಿಲ್ ಸ್ವಲ್ಪ ಹೊತ್ತು ಸ್ಟೂಲಿನ ಮೇಲೆ ಕುಳಿತು ಕುಲುಮೆಯ ಗಾಳಿ ಊದುವ ತಿದಿಯ ಕೋಲನ್ನು ಎಳೆಯಬೇಕಾಗಿತ್ತು. ನಂತರ

